

ಆರು ತಿಂಗಳು ಕಳೆದಿವೆ. ಎಂದಿನಂತೆ ಚಿತ್ರೋದ್ಯಮ ಅಂತಾ ಗೆಲವೇನೂ ಕಂಡಿಲ್ಲ. ಹೋದವರ್ಷದ ಕೆಜಿಎಫ್ ನಂತರ ಒಂದು ಹೊಸ ಗಾಳಿಯಂತೂ ಬೀಸಿದೆ. ಅದೇನು ಅಂದ್ರೆ ಡಿಜಿಟಲ್ ಮಾರ್ಕೆಟ್ ಚೆನ್ನಾಗಿದೆ ಅನ್ನೋ ಮಾತು. ಇದರಲ್ಲಿ ಟೀವಿ ರೈಟ್ಸ್ , ಹಿಂದಿ ಡಬ್ಬಿಂಗ್ ರೈಟ್ಸ್ ಹೊಸ ಹಾಗೂ ಹಳೆ ನಿರ್ಮಾಪಕರನ್ನು ಸಿನಿಮಾ ಮಾಡಬಹುದು ಅಂತ ಪ್ರೇರೇಪಿಸಿದೆ.

ಜನ ಥಿಯೇಟರ್‌ಗಳಿಗೆ ಬರ್ತಿಲ್ಲ, ಸಿನಿಮಾದವರು ಸರಿ ಇಲ್ಲ, ಯಾಮಾರಿಸಿಬಿಡ್ತಾರೆ, ಯಾವ ಸಿನಿಮಾ ಓಡಿದೆ? ಇಂಥ ಅಪಸ್ವರಗಳ ಮಧ್ಯೆಯೂ ಸಿನಿಮಾ ಚಿತ್ರೀಕರಣಗಳು ಭರದಿಂದ ಸಾಗಿವೆ. ಒಂದೂ ಲೈಟ್ ಸಿಗ್ತಿಲ್ಲ; ಕ್ಯಾಮೆರಾಗಳು ಬ್ಯುಸಿ ಇವೆ. ಮೊದಲು ಕನ್ನಡದಲ್ಲಿ ರೀಮೇಕ್ ಹಾವಳಿ ವಿಪರೀತವಾಗಿತ್ತು. ಅದರೀಗ ಡಬ್ಬಿಂಗ್‌ನಿಂದಾಗಿ ಕೊಂಚ ತಣ್ಣಗಾಗಿದೆ. ಹಂಗಂತ ಡಬ್ಬಿಂಗ್ ಸಿನಿಮಾ ಸಕ್ಸಸ್ ಆಗಿದೆ ಅಂತಲ್ಲ; ಕಾರಣ ನಮಗೆ ಕನ್ನಡ ಅನ್ನುವುದು ಭಾಷೆ ಅನ್ನುವುದಕ್ಕಿಂತಲೂ ಮೀರಿದ ಭಾವ. ನೋಡೋಣ ಇನ್ನುಳಿದ ಅರ್ಧ ವರುಷದಲ್ಲಿ ಏನೇನು ಆಗುತ್ತೆ ಅಂತ....

**-ಮಾಸ್ತಿ**
ಸಂಭಾಷಣೆಕಾರ

2019: ಸಮೀಕ್ಷೆ-ನಿರೀಕ್ಷೆ



'ರುಸ್ತುಂ' ಸಿನಿಮಾದಲ್ಲಿ ಶಿವರಾಜ್‌ಕುಮಾರ್

ನಟಿಸಿದ್ದಾರೆ. ರಕ್ಷಿತ್ ಸಿನಿಮಾ ಕೂಡ ಲಕ್ಷ್ಮಿ ಹಬ್ಬಕ್ಕೆ ಬರುವ ಚಿಂತನೆ ನಡೆಸಿತ್ತು. ಈಗ ಪೈಲ್ವಾನ ಮತ್ತು ದುರ್ಯೋಧನ ಒಟ್ಟಿಗೆ ಬರುತ್ತಿರುವುದರಿಂದ, ನಾರಾಯಣ ತನ್ನ ಜರ್ನಿಯನ್ನು ಮುಂದೂಡುವುದು ಖಚಿತ ಎನ್ನುತ್ತಿದ್ದಾರೆ ಗಾಂಧಿನಗರದ ವಯ್ಯಾಕರಣಿಗಳು.

ದರ್ಶನ್, ಸುದೀಪ್, ರಕ್ಷಿತ್‌ರ ನಡುವೆ, ಇವರೆಲ್ಲರಿಗೆ ಅಣ್ಣನಂತಿರುವ ಉಪೇಂದ್ರ ಅವರನ್ನೂ ನೆನಪಿಸಿಕೊಳ್ಳಬೇಕು. ರಾಜಕಾರಣವನ್ನು ಮತ್ತೆ ಚುನಾವಣೆ ಬರುವವರೆಗೂ ಮುಂದೂಡಿರುವ ಉಪ್ಪಿ, ಸಿನಿಮಾಕನ್ನಿಕೆಯ ತೆಕ್ಕೆಗೆ ಮರಳಿದ್ದಾರೆ. ಅವರ ನಟನೆಯ ಹೊಸ ಚಿತ್ರ 'ಐ ಲವ್ ಯು' ತೆರೆಗೆ ಸಿದ್ಧವಾಗಿದೆ. ಈ ಚಿತ್ರದ ನಿರ್ದೇಶನ ಆರ್. ಚಂದ್ರು ಅವರದ್ದು. ಒಬ್ಬರು ರಿಯಲ್ ಸ್ಟಾರ್. ಇನ್ನೊಬ್ಬರು ಸೆಂಟಿಮೆಂಟಲ್ ಡೈರೆಕ್ಟರ್. ವಿರೋಧಾಭಾಸದಂತೆ ಕಾಣಿಸುವ ಈ ವಿಭಿನ್ನ ಸಮೀಕರಣದ ಫಲಿತಾಂಶದ ಬಗ್ಗೆ ಗಾಂಧಿನಗರ ಹುಬ್ಬೇರಿಸಿ ಕಾಯುತ್ತಿದೆ. ರಚಿತಾರಾಮ್ ಹಾಗೂ ಸೋನು ಗೌಡ ಚಿತ್ರದ ನಾಯಕಿಯರು. ರಚಿತಾ ಬೋಲ್ಡಾಗಿ, ಸೋನು ಕೂಲಾಗಿ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರಂತೆ. ಉಪ್ಪಿ 'ಲವ್' ಯಶಸ್ವಿಯಾಗಲಿ ಎನ್ನುವುದು ಅಭಿಮಾನಿಗಳ ಹಾರೈಕೆ.

## ಕಾಲೇಜ್‌ಕುಮಾರ

'ರಾಜ್‌ಕುಮಾರ' ಚಿತ್ರದ ಯಶಸ್ವಿ ಜೋಡಿಯ ಹೊಸ ಚಿತ್ರ 'ಯುವರತ್ನ'. ನಿರ್ದೇಶಕ ಸಂತೋಷ್ ಆನಂದ್‌ರಾಮ್ ಹಾಗೂ ಪುನೀತ್ ರಾಜ್‌ಕುಮಾರ್ ಅವರ 'ಯುವರತ್ನ' ಚಿತ್ರದ ಶೂಟಿಂಗ್ ಪ್ರಗತಿಯಲ್ಲಿದೆ. ಈ ಚಿತ್ರದಲ್ಲಿ ಪುನೀತ್ ಅವರದು ಕಾಲೇಜುಕುಮಾರನ ಪಾತ್ರ. ಬಹಳ ವರ್ಷಗಳ ನಂತರ ಕಾಲೇಜ್ ಕ್ಯಾಂಪಸ್‌ನಲ್ಲಿ ಅಪ್ಪು ಕಾಣಿಸಿಕೊಂಡಿದ್ದಾರೆ. ಕಾಲೇಜ್ ಲೈಫ್ ಎಂದಮೇಲೆ ಲವ್ವು, ಸ್ಟೈಲು–ಸ್ಟೈಲು ಹಾಗೂ ಆ್ಯಕ್ಷನ್‌ಗೆ ಕೊರತೆಯೆಲ್ಲಿ? ಶೀರ್ಷಿಕೆ 'ಯುವರತ್ನ' ಎಂದಾದ ಮೇಲೆ ಒಂದಷ್ಟು ಆದರ್ಶಗಳ ಲೇಪವೂ ನಿರೀಕ್ಷಿತವೇ. ಸದ್ಯದ ಲೆಕ್ಕಾಚಾರದ ಪ್ರಕಾರ, ಡಿಸೆಂಬರ್‌ನಲ್ಲಿ 'ಯುವರತ್ನ' ಚಿತ್ರಮಂದಿರಗಳಿಗೆ ಬರಲಿದ್ದಾನೆ. ಈ ವರ್ಷದ ಪೂರ್ವಾರ್ಧದಲ್ಲಿ ತೆರೆಕಂಡ 'ನಟಸಾರ್ವಭೌಮ' ಚಿತ್ರ ಸಮಾಧಾನಕರ ಗೆಲುವು ಸಾಧಿಸಿದೆ. 'ಯುವರತ್ನ' ಮೂಲಕ 2019ನ್ನು ಸ್ಮರಣೀಯವಾಗಿಸಿಕೊಳ್ಳುವ ತವಕ ಪುನೀತ್‌ರದ್ದು. ಕಿರುತೆರೆಯಲ್ಲಿ ಪುನೀತ್ ನಡೆಸಿಕೊಡುವ 'ಕೋಟ್ಯಧಿಪತಿ' ಕಾರ್ಯಕ್ರಮವೂ ಇದೇ ತಿಂಗಳು ಆರಂಭವಾಗುತ್ತಿದೆ. ಅಲ್ಲಿಗೆ ವರ್ಷಪೂರ್ತಿ ಪುನೀತ್ ಜನಮನದಲ್ಲಿ ಹಸಿರಾಗಿರುವುದು ಖಚಿತ.

'ಕಹಿ' ಚಿತ್ರದ ಮೂಲಕ ಅಪಾರ ನಿರೀಕ್ಷೆಗಳನ್ನು ಮೂಡಿಸಿದ್ದ ಅರವಿಂದ ಶಾಸ್ತ್ರಿ ನಿರ್ದೇಶನದ ಎರಡನೇ ಸಿನಿಮಾ 'ಅಳಿದುಳಿದವರು' ತೆರೆಗೆ ಸಿದ್ಧವಾಗಿದೆ. ಅಶು ಬೇದ್ರೆ ನಿರ್ಮಾಣ–ನಟನೆಯ ಈ ಥ್ರಿಲ್ಲರ್ ಕಥನದ ಬಗ್ಗೆ ಸಹೃದಯರಿಗೆ ಸಾಕಷ್ಟು ನಿರೀಕ್ಷೆಗಳಿವೆ. ಚೊಚ್ಚಲ ಚಿತ್ರದಲ್ಲಿ ದೃಶ್ಯಮಾಧ್ಯಮದ ಕುರಿತು ಅರವಿಂದ್ ತುಡಿತ ಹಾಗೂ ಒಳನೋಟಗಳನ್ನು ಕಂಡವರು 'ಅಳಿದುಳಿದವರು' ಚಿತ್ರದ ಬಗ್ಗೆ ಆಸೆಗಣ್ಣಾಗಿರುವುದು ಸಹಜ. ತಣ್ಣಗೆ ಕೆಲಸ ಮಾಡುವ ಈ ತರುಣ ಪ್ರತಿಭೆ, ತನ್ನದೇ ತಂಡವೊಂದನ್ನು ರೂಪಿಸಿಕೊಂಡು ಸಿನಿಮಾ ಕನಸುಗಳನ್ನು ಕಾಣಲು ಹಂಬಲಿಸುತ್ತಿರುವುದು ಕನ್ನಡ ಚಿತ್ರರಂಗದ ನಾಳೆಗಳ ದೃಷ್ಟಿಯಿಂದ ಆಶಾದಾಯಕ ಬೆಳವಣಿಗೆಯಂತೆ ಕಾಣಿಸುತ್ತದೆ.

ಅರವಿಂದ್ ಕಾಮತ್ ಅವರ 'ಅರಿಷಡ್ವರ್ಗ' ಕೂಡ ಪ್ರಯೋಗಶೀಲತೆಯ ದೃಷ್ಟಿಯಿಂದ ಕುತೂಹಲ ಹುಟ್ಟಿಸಿರುವ ಸಿನಿಮಾ. ಈಗಾಗಲೇ ಲಂಡನ್‌ನ ಒಂದು ಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡುಬಂದಿರುವುದೂ ಈ ಚಿತ್ರದ ಕುರಿತು ನಿರೀಕ್ಷೆ ಹೆಚ್ಚಿಸಿದೆ. ಮನುಷ್ಯನನ್ನು ಕಾಡುವ ಅರಿಷಡ್ವರ್ಗಗಳನ್ನೇ ಸಂಕೇತಿಸುವ ಪಾತ್ರಗಳನ್ನಿಟ್ಟುಕೊಂಡು ಮಾಡಿರುವ ಈ ಸಿನಿಮಾ ಈ ವರ್ಷವೇ ತೆರೆಗೆ ಬರಲಿದೆ.

ರಮೇಶ್ ಅರವಿಂದ್ ನಿರ್ದೇಶನದ 'ಬಟರ್‌ಫ್ಲೈ' 2019ರ ಉತ್ತರಾರ್ಧವನ್ನು ರಂಗೇರಿಸುವ